# ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:20/06/2008 ರ ನಡವಳಿಗಳು

**ವಿಷಯದ ಸಂಖ್ಯೆ:250/08-09**

ಬಿ.ಓ.ಟಿ. ಆಧಾರದ ಮೇಲೆ ದೊಮ್ಮಲೂರು ವಿಮಾನ ನಿಲ್ದಾಣ ರಸ್ತೆಯ ಮೇಲು ಸೇತುವೆಯನ್ನು ಜಾಹೀರಾತು ಹಕ್ಕುಗಳ ಎದುರಿಗೆ 36 ತಿಂಗಳಿಗೆ ನೀಡುವ ಬಗ್ಗೆ.

**ಪ್ರಸ್ತಾವನೆ:**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು, ನಗರದ ಸುಗಮ ಸಂಚಾರದ ಹಿತದೃಷ್ಟಿಯಿಮದ ಹಾಗೂ ವಾಹನ ಚಾಲಕರ ಸುರಕ್ಷತಾ ಹಿತದೃಷ್ಟಿಯಿಂದ ಮೇಲುಸೇತುವೆಗಳು, ಕೆಳಸೇತುವೆಗಳು, ಸುರಂಗಮಾರ್ಗ ಹಾಗೂ ಸರ್ಫೇಸ್ ಪಾಸ್‌ಗಳನ್ನು ನಿರ್ಮಿಸಲು ಪಾಲಿಕೆಯು ತನ್ನಲ್ಲಿರುವ ಸಂಪನ್ಮೂಲಗಳನ್ನು ಕ್ರೋಢೀಕರಿಸಿ ಸಾರ್ವಜನಿಕರ ಹಿತದೃಷ್ಟಿಯಿಂದ ನಿರ್ಮಿಸಲು ಕ್ರಮ ಕೈಗೊಳ್ಳಲಾಗಿರುತ್ತದೆ. ಆದರೆ, ದೊಮ್ಮಲೂರು ಮೇಲುಸೇತುವೆಯನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ನಿರ್ಮಿಸಿ, ಸರ್ಕಾರದ ಆದೇಶ ಸಂಖ್ಯೆ:ಯುಡಿಡಿ/92/ಎಂಎಸ್‌ವೈ/2006 ದಿನಾಂಕ:16/01/2007 ರ ರೀತ್ಯಾ ಸರ್ಕಾರಿ ಅಧಿನಿಯಮದ ಅನುಸಾರ ಇದುವರೆಗೆ 326 ಚದರ ಕಿ.ಮೀ. ವಿಸ್ತೀರ್ಣದಲ್ಲಿದ್ದು, ಬೆಂಗಳೂರು ಮಹಾನಗರ ಪಾಲಿಕೆಯು ಇದೀಗ 800 ಚದರ ಕಿ.ಮೀ ವಿಸ್ತೀರ್ಣದಲ್ಲಿನ ರೂಪುಗೊಂಡಿದೆ. ಅದರಂತೆ ದಾಸರಹಳ್ಳಿ, ಬ್ಯಾಟರಾಯನಪುರ, ಬೊಮ್ಮನಹಳ್ಳಿ, ರಾಜರಾಜೇಶ್ವರಿನಗರ, ಮಹದೇವಪುರ ವಲಯಗಳನ್ನು ಬೆಂಗಳೂರು ಮಹಾನಗರ ಪಾಲಿಕೆಗೆ ವಿಲೀನಗೊಳಿಸಿ ಅಧಿಸೂಚನೆ ಹೊರಡಿಸಲಾಗಿದೆ. ಅದರಂತೆ, ಈ ಪ್ರದೇಶಗಳು ಪಾಲಿಕೆ ವ್ಯಾಪ್ತಿಗೆ ಬರುವುದರಿಂದ ಸದರಿ ಮೇಲು ಸೇತುವೆಯಲ್ಲಿ ವಿವಿಧ ರಾಜಕೀಯ ಪಕ್ಷಗಳು ಹಾಗೂ ಸಂಘ ಸಂಸ್ಥೆಗಳು ಅನಧಿಕೃತವಾಗಿ ಬ್ಯಾನರ್‌ಗಳನ್ನು, ಪೋಸ್ಟರ್‌ಗಳನ್ನು ಹಾಗೂ ಕಟೌಟ್‌ಗಳನ್ನು ಅಳವಡಿಸುತ್ತಿದ್ದು, ಈ ರೀತಿಯ ಅನಧಿಕೃತವಾಗಿ ಪ್ರಚಾರ ಜಾಹೀರಾತು ಸಾಮಗ್ರಿಗಳನ್ನು ತಡೆಗಟ್ಟುವ ಸಂಬಂಧ ಸದರಿ ಮೇಲುಸೇತುವೆಯಲ್ಲಿ ಬರುವ ವಿದ್ಯುತ್ ಕಂಬಗಳ ಮೇಲೆ ಕಿಯೋಸ್ಕ್‌ಗಳನ್ನು ಹಾಗೂ ಸೇತುವೆಯ ಕೆಳಭಾಗದಲ್ಲಿ ಗ್ಲೋಸೈನ್ ಬಾಕ್ಸ್‌ಗಳನ್ನು ಹಾಗೂ ನೀರಿನ ಕಾರಂಜಿಯನ್ನು ಅಳವಡಿಸಿ ಜಾಹೀರಾತು ಮಾಡಿಕೊಳ್ಳಲು ಬಿ..ಓ.ಟಿ. ಆಧಾರದಲ್ಲಿ ಟೆಂಡರ್ ಕಂ ಹರಾಜು ಮೂಲಕ ನೀಡಿದಲ್ಲಿ ಬಗರ ಪಾಲಿಕೆಗೆ ಹೆಚ್ಚಿನ ಆದಾಯ ಅಭಿವೃದ್ಧಿಯಾಗುವುದಲ್ಲದೇ ಅನಧಿಕೃತ ಜಾಹೀರಾತುಗಳನ್ನು ತಡೆಗಟ್ಟಬಹುದಾಗಿರುತ್ತದೆ ಎಂದು ಉದ್ದೇಶಿಸಿ ಟೆಂಡರ್ ಕಂ ಹರಾಜನ್ನು ದಿನಾಂಕ:10/03/2008 ರಂದು ಮಾಡಲಾಗಿದ್ದು, ಸದರಿ ಟೆಂಡರ್ ಕಂ ಹರಾಜಿನಲ್ಲಿ ಈ ಕೆಳಕಂಡ ಜಾಹೀರಾತು ಸಂಸ್ಥೆಯವರು ಯಶಸ್ವಿಯಾಗಿರುತ್ತಾರೆ.

| ಪ್ಯಾಕೇಜ್ ಸಂಖ್ಯೆ:01 | | | | |
|---|---|---|---|---|
| ಕ್ರ.ಸಂ | ಜಾಹೀರಾತು ಸಂಸ್ಥೆಯ ಹೆಸರು | ಮೇಲುಸೇತುವೆಗಳ ಸಂಖ್ಯೆ | ಕನಿಷ್ಟ ನೆಲ ಬಾಡಿಗೆ | ಯಶಸ್ವಿ ಹರಾಜು/ಹಣಕಾಸಿನ ಬಿಡ್ ಮೊತ್ತ |
| 1 | ಮೆ॥ ಔಟ್‌ಡೋರ್/ಮೀಡಿಯಾ | 01 | ರೂ.10,00,000 | ರೂ.55,57,777/- |
| | ಒಟ್ಟು | 01 | ರೂ.10,00,000 | ರೂ.55,57,777/- |

ಸದರಿ ಮೇಲು ಸೇತುವೆಯಿಂದ ನೆಲ ಬಾಡಿಗೆ ರೂ.55,57,777/- ಮತ್ತು ಜಾಹೀರಾತು ತೆರಿಗೆ (1080 ಚದರ ಅಡಿಗಳು) ರೂ.1,01,430/- ಒಟ್ಟು ರೂ.56,59,207/- ಗಳನ್ನು ಪ್ರತಿ ವರ್ಷ ವರಮಾನವಾಗಿ ಪಡೆಯಬಹುದಾಗಿದೆ. ಸದರಿ ಬಿಡ್‌ದಾರರಿಗೆ 3 ವರ್ಷಗಳ (ಒಟ್ಟು 36 ತಿಂಗಳು) ಅವಧಿಗೆ ಮೇಲ್ಕಂಡ ಪ್ಯಾಕೇಜ್‌ನಲ್ಲಿ ಬರುವ ಮೇಲು ಸೇತುವೆಯನ್ನು ನಿರ್ಮಿಸಿ ನಿರ್ವಹಣೆ ಮಾಡಲು 36 ತಿಂಗಳ ನಂತರ ಪಾಲಿಕೆಗೆ ಹಸ್ತಾಂತರಿಸುವ ಬಗ್ಗೆ ಕರಾರು ಮಾಡಿಕೊಳ್ಳಬೇಕಾಗಿದೆ. ಟೆಂಡರ್ ನಿಯಮಾವಳಿಗಳಂತೆ ಮೊದಲ 12 ತಿಂಗಳುಗಳಿಗೆ ಕರಾರು ಪತ್ರ ಮಾಡಿಕೊಂಡು ನಂತರ ಯಶಸ್ವಿ ನಿರ್ವಹಣೆ ಮಾಡಿದ್ದಲ್ಲಿ 24 ತಿಂಗಳುಗಳಿಗೆ ವಿಸ್ತರಿಸಬಹುದಾಗಿದೆ.

ಸದರಿ ಮೇಲುಸೇತುವೆಯನ್ನು ನಿರ್ಮಿಸಿ ನಿರ್ವಹಣೆ ಮಾಡಿ ಜಾಹೀರಾತುಗಳನ್ನು ಮಾಡಿಕೊಳ್ಳಲು ಹಾಗೂ ಮೇಲುಸೇತುವೆಯಲ್ಲಿ ಅಳವಡಿಸಿರುವ ಎಲ್ಲಾ ಪರಿಕರಗಳೊಂದಿಗೆ ಪಾಲಿಕೆಗೆ ಹಸ್ತಾಂತರಿಸುವ ಷರತ್ತುಗೊಳಪಟ್ಟು 01 ವರ್ಷದ ಅವಧಿಗೆ ಅನುಮತಿ ನೀಡಲು ಹಾಗೂ ನಂತರ 24 ತಿಂಗಳಿಗೆ ಕರಾರು ಮಾಡಿಕೊಳ್ಳಲು ಸೂಕ್ತ ನಿರ್ಣಯಕ್ಕಾಗಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:11/06/2008 ರ ಟಿಪ್ಪಣಿ

**ತೀರ್ಮಾನ:** ಆಯುಕ್ತರವರ ದಿನಾಂಕ:11/06/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

**ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:20/06/2008 ರ ನಡವಳಿಗಳು**

**ವಿಷಯದ ಸಂಖ್ಯೆ:251/2008–09**

Asphalting to Ring Road from Mysore Road junction to Silk Board junction via J.P.Nagar, BTM Layout, Ch 1.90 to 3.90 Km Right side Carriageway ರ ಕಾಮಗಾರಿ ಬಗ್ಗೆ.

**ಪ್ರಸ್ತಾವನೆ:**

Asphalting to Ring Road from Mysore Road junction to Silk Board junction via J.P.Nagar, BTM Layout, Ch 1.90 to 3.90 Km Right side Carriageway ರ ಕಾಮಗಾರಿಗೆ ಅಂದಾಜು ಪಟ್ಟಿಯನ್ನು 2007–08ನೇ ಸಾಲಿನ ದರಪಟ್ಟಿಯನ್ವಯ ರೂ.99,00,000.00 ಗಳಿಗೆ ತಯಾರಿಸಲಾಗಿರುತ್ತದೆ.

ಕಾರ್ಯಪಾಲಕ ಅಭಿಯಂತರರು (ಯೋಜನೆ–ಕೇಂದ್ರ–1) ರವರು ದಿನಾಂಕ:07/03/2008 ರಂದು ಎರಡು ಲಕೋಟೆ ಪದ್ಧತಿಯಲ್ಲಿ (ಅಲ್ಪಾವಧಿ ಟೆಂಡರ್ ಪ್ರಕಟಣೆ) ಟೆಂಡರ್ ಆಹ್ವಾನಿಸಿರುತ್ತಾರೆ. ಗುತ್ತಿಗೆದಾರರಿಂದ 02 ಟೆಂಡರ್‌ಗಳು ಸ್ವೀಕೃತವಾಗಿದ್ದು, ಈ ಟೆಂಡರ್‌ಗಳು ಸಿಂಧುವಾಗಿರುತ್ತದೆ. ಕಾರ್ಯಪಾಲಕ ಅಭಿಯಂತರರು (ಯೋಜನೆ–ಕೇಂದ್ರ–1) ರವರು ಟೆಂಡರ್‌ದಾರರಾದ ಶ್ರೀ.ಬಿ.ಕೆ.ವಿನೋದ್‌ಕುಮಾರ್ ಗುತ್ತಿಗೆದಾರರ ಟೆಂಡರ್ ಪ್ರಸ್ತಾವನೆಯನ್ನು ಅನುಮೋದನೆಗಾಗಿ ಸಲ್ಲಿಸಿರುತ್ತಾರೆ.

ಟೆಂಡರ್‌ಗಿಟ್ಟ ಮೊಬಲಗು ರೂ.98,86,901.03 ಗಳಾಗಿದ್ದು, ಮಂಜೂರಾದ ದರಗಳಿಗೆ ಗುತ್ತಿಗೆದಾರರಾದ ಶ್ರೀ.ಬಿ.ಕೆ.ವಿನೋದ್‌ಕುಮಾರ್ ರವರು ಶೇಕಡ 41.04 ರಷ್ಟು ಹೆಚ್ಚುವರಿ ದರಗಳನ್ನು ದರಪಟ್ಟಿ 2007–08 ರ ಮೇಲೆ ನಮೂದಿಸಿದ ಟೆಂಡರ್‌ದಾರರಾಗಿರುತ್ತಾರೆ. ಸದರಿ ಹೆಚ್ಚುವರಿ ದರಗಳನ್ನು ಚಾಲ್ತಿ ದರಗಳಿಗೆ ಹೋಲಿಸಿದಾಗ ಇದು ಶೇ. 23.89 ರಷ್ಟು ಹೆಚ್ಚುವರಿಯಾಗಿರುತ್ತದೆ. ನಮೂದಿಸಿದ ದರಗಳು ಹೆಚ್ಚಿನದಾಗಿದ್ದುದರಿಂದ ಗುತ್ತಿಗೆದಾರರೊಡನೆ ಸಂಧಾನ ನಡೆಸಲಾಗಿ ಗುತ್ತಿಗೆದಾರರು ಸಂಧಾನದ ನಂತರ ಶೇಕಡ 30.34 ರಷ್ಟು ಹೆಚ್ಚುವರಿ ದರಗಳನ್ನು ನಮೂದಿಸಿರುತ್ತಾರೆ. ಸದರಿ ಸಂಧಾನದ ದರಗಳನ್ನು ಹೋಲಿಕೆ ಮಾಡಿ ಪ್ರಸಕ್ತ ಸಾಲಿನ ದರಪಟ್ಟಿಗೆ (2007–08) ಹಾಗೂ ಬಿಟುಮಿನ್‌ನ ಮಾರುಕಟ್ಟೆಯ ದರಗಳ ಬಗ್ಗೆ ಲೋಕೋಪಯೋಗಿ ಇಲಾಖೆಯಿಂದ ಪ್ರಚುರಪಡಿಸಿರುವ ದರಗಳಿಗೆ ಹೋಲಿಸಿದಾಗ ಶೇಕಡ 14.49 ರಷ್ಟು ಹೆಚ್ಚಿನ ದರಗಳು ಕಂಡು ಬಂದಿರುತ್ತದೆ.

ಈ ಹಿನ್ನೆಲೆಯಲ್ಲಿ, ಸದರಿ ಕಾಮಗಾರಿಯ ಅಂದಾಜು ಮೊತ್ತ ರೂ.99,00,000.00 ಗಳಿಗೆ ಆಡಳಿತಾತ್ಮಕ ಅನುಮೋದನೆ ಹಾಗೂ ಕನಿಷ್ಠ ಟೆಂಡರ್ ಗುತ್ತಿಗೆದಾರರಾದ ಶ್ರೀ.ಬಿ.ಕೆ.ವಿನೋದ್‌ಕುಮಾರ್ ರವರು ಪ್ರಸಕ್ತ 2007–08 ನೇ ಸಾಲಿನ ದರಪಟ್ಟಿಗೆ ಹಾಗೂ ಬಿಟುಮಿನ್ ಮಾರುಕಟ್ಟೆಯ ಹೆಚ್ಚುವರಿ ದರಗಳ ಮೇಲೆ ನಮೂದಿಸಿರುವ ಶೇಕಡ 14.49 ರಷ್ಟು ಅಥವಾ ರೂ. 1,28,86,655.00 ಗಳ ಟೆಂಡರ್‌ಗೆ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:10/06/2008 ರ ಟಿಪ್ಪಣಿ.

**ತೀರ್ಮಾನ:** ಆಯುಕ್ತರವರ ದಿನಾಂಕ:10/06/2008ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

# ಬೆಂಗಳೂರು ಮಹಾನಗರ ಪಾಲಿಕೆ

323

**ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:20/06/2008 ರ ನಡವಳಿಗಳು**

**ವಿಷಯದ ಸಂಖ್ಯೆ:252/2008-09**

Asphalting to Ring Road from Mysore Road junction to Silk Board junction via J.P.Nagar, BTM Layout, Ch 0.00 to 1.90 Km Right side Carriageway ರ ಕಾಮಗಾರಿ ಬಗ್ಗೆ.

**ಪ್ರಸ್ತಾವನೆ:**

Asphalting to Ring Road from Mysore Road junction to Silk Board junction via J.P.Nagar, BTM Layout, Ch 0.00 to 1.90 Km Right side Carriageway ರ ಕಾಮಗಾರಿಗೆ ಅಂದಾಜು ಪಟ್ಟಿಯನ್ನು 2007-08ನೇ ಸಾಲಿನ ದರಪಟ್ಟಿಯನ್ವಯ ರೂ.99,00,000.00 ಗಳಿಗೆ ತಯಾರಿಸಲಾಗಿರುತ್ತದೆ.

ಕಾರ್ಯಪಾಲಕ ಅಭಿಯಂತರರು (ಯೋಜನೆ-ಕೇಂದ್ರ-1) ರವರು ದಿನಾಂಕ:07/03/2008 ರಂದು ಎರಡು ಲಕೋಟೆ ಪದ್ಧತಿಯಲ್ಲಿ (ಅಲ್ಪಾವಧಿ ಟೆಂಡರ್ ಪ್ರಕಟಣೆ) ಟೆಂಡರ್ ಆಹ್ವಾನಿಸಿರುತ್ತಾರೆ. ಗುತ್ತಿಗೆದಾರರಿಂದ 02 ಟೆಂಡರ್‌ಗಳು ಸ್ವೀಕೃತವಾಗಿದ್ದು, ಟೆಂಡರ್‌ಗಳು ಸಿಂಧುವಾಗಿರುತ್ತದೆ. ಕಾರ್ಯಪಾಲಕ ಅಭಿಯಂತರರು (ಯೋಜನೆ-ಕೇಂದ್ರ-1) ರವರು ಶ್ರೀ.ಎಸ್.ಕೆ.ಮೂರ್ತಿ, ಗುತ್ತಿಗೆದಾರರ ಟೆಂಡರ್ ಪ್ರಸ್ತಾವನೆಯನ್ನು ಅನುಮೋದನೆಗಾಗಿ ಸಲ್ಲಿಸಿರುತ್ತಾರೆ.

ಟೆಂಡರ್‌ಗಿಟ್ಟ ಮೊಬಲಗು ರೂ.98,99,260.18 ಗಳಾಗಿದ್ದು, ಮಂಜೂರಾದ ದರಗಳಿಗೆ ಗುತ್ತಿಗೆದಾರರಾದ ಶ್ರೀ ಎಸ್.ಕೆ.ಮೂರ್ತಿ, ರವರು ಶೇಕಡ 44.57 ರಷ್ಟು ಹೆಚ್ಚುವರಿ ರಗಳನ್ನು ದರಪಟ್ಟಿ 2007-08 ರ ಮೇಲೆ ನಮೂದಿಸಿದ ಟೆಂಡರ್‌ದಾರರಾಗಿರುತ್ತಾರೆ. ಸದರಿ ಹೆಚ್ಚುವರಿ ದರಗಳನ್ನು ಚಾಲ್ತಿ ದರಗಳಿಗೆ ಹೋಲಿಸಿದಾಗ ಇದು ಶೇ. 25.79 ರಷ್ಟು ಹೆಚ್ಚುವರಿಯಾಗಿರುತ್ತದೆ. ನಮೂದಿಸಿದ ದರಗಳು ಹೆಚ್ಚಿನದಾಗಿದ್ದುದರಿಂದ ಗುತ್ತಿಗೆದಾರರೊಡನೆ ಸಂಧಾನ ನಡೆಸಲಾಗಿ ಗುತ್ತಿಗೆದಾರರು ಸಂಧಾನದ ನಂತರ ಶೇಕಡ 31.48 ರಷ್ಟು ಹೆಚ್ಚುವರಿ ದರಗಳನ್ನು ನಮೂದಿಸಿರುತ್ತಾರೆ. ಸದರಿ ಸಂಧಾನದ ದರಗಳನ್ನು ತುಲನೆ ಮಾಡಿ ಪ್ರಸಕ್ತ ಸಾಲಿನ ದರಪಟ್ಟಿಗೆ (2007-08) ಹಾಗೂ ಬಿಟುಮಿನ್‌ನ ಮಾರುಕಟ್ಟೆಯ ದರಗಳ ಬಗ್ಗೆ ಲೋಕೋಪಯೋಗಿ ಇಲಾಖೆಯಿಂದ ಪ್ರಚುರಪಡಿಸಿರುವ ದರಗಳಿಗೆ ಹೋಲಿಸಿದಾಗ ಶೇಕಡ 14.40 ರಷ್ಟು ಹೆಚ್ಚಿನ ದರಗಳು ಕಂಡು ಬಂದಿರುತ್ತದೆ.

ಈ ಹಿನ್ನೆಲೆಯಲ್ಲಿ ಸದರಿ ಕಾಮಗಾರಿಯ ಅಂದಾಜು ಮೊತ್ತ ರೂ.99,00,000.00 ಗಳಿಗೆ ಆಡಳಿತಾತ್ಮಕ ಅನುಮೋದನೆ ಹಾಗೂ ಕನಿಷ್ಠ ಟೆಂಡರ್ ಗುತ್ತಿಗೆದಾರರಾದ ಶ್ರೀ ಎಸ್.ಕೆ.ಮೂರ್ತಿ, ರವರು ಪ್ರಸಕ್ತ 2007-08 ನೇ ಸಾಲಿನ ದರಪಟ್ಟಿಗೆ ಹಾಗೂ ಬಿಟುಮಿನ್ ಮಾರುಕಟ್ಟೆಯ ಹೆಚ್ಚುವರಿ ದರಗಳ ಮೇಲೆ ನಮೂದಿಸಿರುವ ಶೇಕಡ 14.40 ರಷ್ಟು ಅಥವಾ ರೂ.1,30,15,765.00 ಗಳ ಟೆಂಡರ್‌ಗೆ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:11/06/2008 ರ ಟಿಪ್ಪಣಿ.

**ತೀರ್ಮಾನ:** ಆಯುಕ್ತರವರ ದಿನಾಂಕ:11/06/2008ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

324

# ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:20/06/2008 ರ ನಡವಳಿಗಳು**

**ವಿಷಯದ ಸಂಖ್ಯೆ:253/2008-09**

Provinding utility cable ducts & chambers for BESCOM & other utility cables in palace road on West side from 0 to 1.35 Km ರ ಕಾಮಗಾರಿ ಬಗ್ಗೆ.

**ಪ್ರಸ್ತಾವನೆ:**

Provinding utility cable ducts & chambers for BESCOM & other utility cables in palace road on West side from 0 to 1.35 Km ರ ಕಾಮಗಾರಿಗೆ ರೂ.98.15 ಲಕ್ಷಗಳಿಗೆ ಅಂದಾಜು ಪಟ್ಟಿ ತಯಾರಿಸಿ, ಟೆಂಡರ್ ಕರೆಯಲಾಗಿ, ಸದರಿ ಟೆಂಡರಿನಲ್ಲಿ ಶ್ರೀ.ಎನ್.ಸಿ.ನಾಗರಾಜ್, ಮೆ॥ ಪರಿಚಿತ ಕನ್‌ಸ್ಟ್ರಕ್ಷನ್, ಮತ್ತು ಶ್ರೀ.ಎನ್.ಬಿ.ನಾಗರಾಜ್ ಗುತ್ತಿಗೆದಾರರುಗಳು ಭಾಗವಹಿಸಿದ್ದು, ಅರ್ಹರಾದ ಮೂವರು ಗುತ್ತಿಗೆದಾರರ ಆರ್ಥಿಕ ಬಿಡ್‌ಗಳನ್ನು ದಿನಾಂಕ:02/04/08 ರಂದು ತೆರೆಯಲಾಗಿದ್ದು ವಿವರಗಳು ಈ ಕೆಳಕಂಡಂತಿವೆ.

1) ಶ್ರೀ.ಎನ್.ಸಿ. ನಾಗರಾಜ್ ರವರು ಒಟ್ಟು ರೂ.1,20,99,250/- ನಮೂದಿಸಿದ್ದು, ಇದು 2007-08ನೇ ಸಾಲಿನ ದರಪಟ್ಟಿ ಹಾಗೂ ಹೆಚ್ಚುವರಿ ಸಿಮೆಂಟ್ ಬಿಟುಮಿನ್ ದರಗಳಿಗೆ ಹೋಲಿಸಿದಾಗ ಶೇ.23.09% ರಷ್ಟು ಹೆಚ್ಚಾಗಿರುತ್ತದೆ.
2) ಶ್ರೀ.ಎನ್.ಬಿ. ನಾಗರಾಜ್ ರವರು ಒಟ್ಟು ರೂ.1,31,78,030/- ನಮೂದಿಸಿದ್ದು, ಇದು 2007-08ನೇ ಸಾಲಿನ ದರಪಟ್ಟಿ ಹಾಗೂ ಹೆಚ್ಚುವರಿ ಸಿಮೆಂಟ್ ಬಿಟುಮಿನ್ ದರಗಳಿಗೆ ಹೋಲಿಸಿದಾಗ ಶೇ.34.07% ರಷ್ಟು ಹೆಚ್ಚಾಗಿರುತ್ತದೆ.
3) ಮೆ॥ ಪರಿಚಿತ ಕನ್‌ಸ್ಟ್ರಕನ್ ರವರು ಒಟ್ಟು ರೂ.1,22,73,386/- ನಮೂದಿಸಿದ್ದು, ಇದು 2007-08ನೇ ಸಾಲಿನ ದರಪಟ್ಟಿ ಹಾಗೂ ಹೆಚ್ಚುವರಿ ಸಿಮೆಂಟ್ ಬಿಟುಮಿನ್ ದರಗಳಿಗೆ ಹೋಲಿಸಿದಾಗ ಶೇ.25.06% ರಷ್ಟು ಹೆಚ್ಚಾಗಿರುತ್ತದೆ.

ಸದರಿ ಕಾಮಗಾರಿಗೆ ಶ್ರೀ.ಎನ್.ಸಿ. ನಾಗರಾಜ್ ರವರು ಕನಿಷ್ಟ ದರ ನಮೂದಿಸಿರುವ ಗುತ್ತಿಗೆದಾರರಾಗಿದ್ದು, 2007-08ರ ಸಾಲಿನ ದರಸೂಚಿ ಹಾಗೂ 08-09ನೇ ಸಾಲಿನ ಹೆಚ್ಚುವರಿ ಸಿಮೆಂಟ್/ಉಕ್ಕು/ಬಿಟುಮಿನ್ ದರಗಳಿಗೆ ಹೋಲಿಸಿದಲ್ಲಿ ಶೇ.23.09% ರಷ್ಟು ಹೆಚ್ಚಿಗೆ ದರವನ್ನು ನಮೂದಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ಗುತ್ತಿಗೆದಾರರೊಂದಿಗೆ ಸಂಧಾನ ನಡೆಸಲಾಗಿದ್ದು, ಗುತ್ತಿಗೆದಾರರು ಸಂಧಾನದ ನಂತರ ಶೇ.19.50% ಗೆ ಕಾಮಗಾರಿಗೆ ನಿರ್ವಹಿಸುವುದಾಗಿ ಒಪ್ಪಿರುತ್ತಾರೆ.

ಈ ಹಿನ್ನೆಲೆಯಲ್ಲಿ ಗುತ್ತಿಗೆದಾರರಾದ ಶ್ರೀ.ಎನ್.ಸಿ.ನಾಗರಾಜ್ ರವರ ನಮೂದಿಸಿರುವ ಮೊತ್ತ ರೂ.1,17,45,915/- ಗಳಾಗಿದ್ದು, ಇದನ್ನು 2007-08 ರ ಸಾಲಿನ ದರ ಸೂಚಿ ಹಾಗೂ 2008-09ನೇ ಸಾಲಿನ ಹೆಚ್ಚುವರಿ ಸಿಮೆಂಟ್ ಬಿಟುಮಿನ್ ದರಗಳ ಮೊತ್ತ ರೂ.98,29,217/- ಗಳಿಗೆ ಹೋಲಿಸಿದಾಗ ಶೇ.19.50% ರಷ್ಟು ಹೆಚ್ಚಿರುವ ಈ ಟೆಂಡರ್‌ನ ಅನುಮೋದನ ಕೋರಿ ಮಾನ್ಯ ಅಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:10/06/2008 ರ ಟಿಪ್ಪಣಿ.

**ತೀರ್ಮಾನ:** ಆಯುಕ್ತರವರ ದಿನಾಂಕ:10/06/2008ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

**ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:20/06/2008 ರ ನಡವಳಿಗಳು**

ವಿಷಯದ ಸಂಖ್ಯೆ:254/2008-09

ಬೆಂಗಳೂರಿನ ಕಾವೇರಿ ಜಂಕ್ಷನ್ ಬಳಿ ನಿರ್ಮಿಸುತ್ತಿರುವ ಅಂಡರ್‌ಪಾಸ್ ಕಾಮಗಾರಿಗೆ ರಸ್ತೆ ಉಪಕರಣಗಳನ್ನು ಅಳವಡಿಸಲು ಹಾಗೂ ಪೈಟಿಂಗ್ ಮಾಡುವ ಕಾಮಗಾರಿಯ ಬಗ್ಗೆ.

ಪ್ರಸ್ತಾವನೆ:

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಬೆಂಗಳೂರಿನ ಕಾವೇರಿ ಜಂಕ್ಷನ್ ಬಳಿ ಅಂಡರ್‌ಪಾಸ್ ನಿರ್ಮಿಸಲಾಗಿದ್ದು, ಸದರಿ ಅಂಡರ್‌ಪಾಸ್ ಬಳಿ ರಸ್ತೆ ಸಂಚಾರ ಸುಗಮಗೊಳಿಸುವ ಉದ್ದೇಶದಿಂದ ಚಾಲಕರಿಗೆ ಸ್ಪಷ್ಟ ಮಾಹಿತಿಯನ್ನು ನೀಡಲು ಅನುಕೂಲವಾಗುವಂತೆ ರಸ್ತೆ ಉಪಕರಣಗಳನ್ನು ಅಳವಡಿಸಬೇಕಾಗಿದ್ದು, ಹಾಗೂ ಪೈಟಿಂಗ್ ಅನ್ನು ಸಹ ಮಾಡಬೇಕಾಗಿರುತ್ತದೆ.

ಸದರಿ ಕಾಮಗಾರಿಗೆ NHSR 07-08ನೇ ಸಾಲಿನ ದರಪಟ್ಟಿಯಂತೆ ರೂ.4.98 ಲಕ್ಷಗಳಿಗೆ ಅಂದಾಜು ಪಟ್ಟಿಯನ್ನು ತಯಾರಿಸಲಾಗಿರುತ್ತದೆ.

ಸದರಿ ಕಾಮಗಾರಿಗೆ ಟಿ.ಇ.ಸಿ. ಆಯವ್ಯಯ 2008-09ನೇ ಸಾಲಿನ "High Raised Medians & Other Equipment" ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಕಾಮಗಾರಿ ಸಂಕೇತ ಪಡೆಯಲಾಗಿದ್ದು, ತುಂಡು ಗುತ್ತಿಗೆ ಆಧಾರದ ಮೇಲೆ ಮೆ॥ ಬಿ.ಕೆ. ಎಂಟರ್ ಪ್ರೈಸಸ್ ರವರಿಗೆ ವಹಿಸಲು ಉದ್ದೇಶಿಸಲಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಬೆಂಗಳೂರಿನ ಕಾವೇರಿ ಜಂಕ್ಷನ್ ಬಳಿ ನಿರ್ಮಿಸುತ್ತಿರುವ ಅಂಡರ್‌ಪಾಸ್ ಕಾಮಗಾರಿಗೆ ರಸ್ತೆ ಉಪಕರಣಗಳನ್ನು ಅಳವಡಿಸಲು ಹಾಗೂ ಪೈಟಿಂಗ್ ಮಾಡುವ ಕಾಮಗಾರಿ ರೂ.4.98 ಲಕ್ಷಗಳನ್ನು ಮೆ॥ಬಿ.ಕೆ. ಎಂಟರ್ ಪ್ರೈಸಸ್ ರವರಿಗೆ ತುಂಡು ಗುತ್ತಿಗೆ ಆಧಾರದ ಮೇಲೆ ವಹಿಸಲು ಅನುಮೋದನೆಯನ್ನು ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:13/06/2008 ರ ಟಿಪ್ಪಣಿ

**ತೀರ್ಮಾನ:** ಆಯುಕ್ತರವರ ದಿನಾಂಕ:13/06/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

**ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:21/06/2008 ರ ನಡವಳಿಗಳು**

**ವಿಷಯದ ಸಂಖ್ಯೆ:255/2008-09**

Approval for the modified estimate for the work of Improvements to footpath & main road in Ward No.40 ರ ಕಾಮಗಾರಿ ಬಗ್ಗೆ.

**ಪ್ರಸ್ತಾವನೆ:**

Approval for the modified estimate for the work of Improvements to footpath & main road in Ward No.40 ರ ಕಾಮಗಾರಿಯನ್ನು ದರಪಟ್ಟಿ 2004-05 ರಂತೆ ರೂ.45.00 ಲಕ್ಷಕ್ಕೆ ಅಂದಾಜು ಪಟ್ಟಿ ತಯಾರಿಸಿದ್ದು, ಟೆಂಡರ್ ಕರೆದು ಗುತ್ತಿಗೆದಾರರಾದ ಶ್ರೀ ಚಿಕ್ಕ ಹೊಂಬಯ್ಯ ಅವರಿಗೆ ಶೇ.16.16% ರಷ್ಟು ಹೆಚ್ಚುವರಿ ದರಗಳಿಗೆ ದಿನಾಂಕ:06/06/2007 ರಂದು ಕಾರ್ಯದೇಶ ನೀಡಲಾಗಿದೆ. ಕಾಮಗಾರಿ ನಿರ್ವಹಿಸುವ ಸಮಯದಲ್ಲಿ ಕಾರ್ಯಪಾಲಕ ಅಭಿಯಂತರರು (ಚಂದ್ರ ಬಡಾವಣೆ) ರವರು ಮಾನ್ಯ ಆಯುಕ್ತರವರ ಆದೇಶದಂತೆ ಪಾದಚಾರಿ ರಸ್ತೆಯಲ್ಲಿ ಯು.ಜಿ.ಕೇಬಲ್‌ಗಳನ್ನು ಅಳವಡಿಸಲು ಪಿ.ವಿ.ಸಿ ಪಾದಚಾರಿ ರಸ್ತೆಯನ್ನು ನಿರ್ಮಿಸಿರುತ್ತಾರೆ. ಈ ಪಿ.ವಿ.ಸಿ ಪೈಪ್‌ಗಳನ್ನು ಅಳವಡಿಸಲು ವಿಶೇಷ ಆಯುಕ್ತರು (ಆಡಳಿತ) ರವರು ಅನುಮೋದಿಸಿರುವ ದರಗಳನ್ನು ಅಳವಡಿಸಿಕೊಂಡು ಪಾದಚಾರಿ ರಸ್ತೆಯಲ್ಲಿ ಸಾರ್ವಜನಿಕ ಉಪಯೋಗದ ಕೊಳವೆಗಳನ್ನು ಹಾಗೂ ಇತರೆ ಯು.ಜಿ.ಕೇಬಲ್‌ಗಳನ್ನು ಅಳವಡಿಸಲು ಪಿ.ವಿ.ಸಿ. ಪೈಪ್‌ಗಳನ್ನು ಅಳವಡಿಸಿರುತ್ತಾರೆ.

ಈ ಸಂಬಂಧ ಮೂಲ ಅಂದಾಜು ಪಟ್ಟಿಯಲ್ಲಿ ಕೆಲವು ಮಾರ್ಪಾಡುಗಳನ್ನು ಮಾಡಿ ಮತ್ತು ಸ್ಥಳದಲ್ಲಿ ಪಿ.ವಿ.ಸಿ ಪೈಪ್ ಅಳವಡಿಸಲು ಅವಶ್ಯವಿರುವ ಇ.ಐ.ಆರ್.ಎಲ್ ಮತ್ತು ವರ್ಕ್‌ಸ್ಲಿಪ್ ಅಂಶಗಳನ್ನು ಅಳವಡಿಸಿಕೊಂಡು ಮಾರ್ಪಾಡಿತ ಅಂದಾಜು ಪಟ್ಟಿ ರೂ.49,28,708.00 ಗಳಿಗೆ (ಟಿ.ಪಿ.ಸೇರಿ) ಅನುಮೋದನೆಗಾಗಿ ಮುಖ್ಯ ಅಭಿಯಂತರರು (ದಕ್ಷಿಣ) ರವರು ಸಲ್ಲಿಸಿದ್ದು, ಈ ಪ್ರಸ್ತಾವನೆಗೆ ಮಾನ್ಯ ಆಯುಕ್ತರು ಒಪ್ಪಿಗೆ ನೀಡಿರುತ್ತಾರೆ.

ಈ ಹಿನ್ನೆಲೆಯಲ್ಲಿ ಸದರಿ ಮಾರ್ಪಾಡಿತ ಅಂದಾಜು ಪಟ್ಟಿಯಲ್ಲಿ ಪಾದಚಾರಿ ರಸ್ತೆಯಲ್ಲಿ ಯು.ಜಿ.ಕೇಬಲ್‌ಗಳನ್ನು ಅಳವಡಿಸಲು ಪಿ.ವಿ.ಸಿ ಪೈಪ್‌ಗಳನ್ನು ಅಳವಡಿಸಿ ಪಾದಚಾರಿ ರಸ್ತಯನ್ನು ನಿರ್ಮಿಸಲು ತೆಗೆದುಕೊಂಡ ಕ್ರಮದಂತೆ ಮಾರ್ಪಾಡಿತ ಅಂದಾಜು ಪಟ್ಟಿಯಲ್ಲಿ ಅಡಕಗೊಳಿಸಿರುವ EIRL & Workslip ಐಟಂಗಳ ಅಂಶಗಳಿಗೆ ಮತ್ತು ಮಾರ್ಪಾಡಿತ ಅಂದಾಜು ಪಟ್ಟಿಯ ಮೊತ್ತವಾದ ರೂ.49,28,708.00 ಗಳಿಗೆ (ಟಿ.ಪಿ.ಸೇರಿ) ಅನುಮೋದಿಸುವ ಆರ್ಥಿಕದತ್ತವಾದ ಅಧಿಕಾರ ಮಾನ್ಯ ಆಡಳಿತಗಾರರ ವ್ಯಾಪ್ತಿಯಲ್ಲಿರುತ್ತದೆ. ಈ ಹಿನ್ನೆಲೆಯಲ್ಲಿ ಕಾರ್ಯಪಾಲಕ ಅಭಿಯಂತರರು (ಚಂದ್ರ ಬಡಾವಣೆ) ರವರು ಸಲ್ಲಿಸಿರುವ ಹೆಚ್ಚುವರಿ ಮೊತ್ತ ರೂ.20,27,626.50 ಗಳಿಗೆ ಅನುಮೋದನೆ ಮತ್ತು ವರ್ಕ್ ಸ್ಲಿಪ್ ಮೊತ್ತ ರೂ.3,08,730.00 ಗಳ ಅನುಮೋದನೆ ಹಾಗೂ ಮಂಜೂರಾದ ಮೂಲ ಅಂದಾಜಿನ ವ್ಯಾಪ್ತಿಯಲ್ಲಿರುವ ರೂ.49,28,708.00 ಗಳ ಮಾರ್ಪಾಡು ಅಂದಾಜು ಪಟ್ಟಿಗೆ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:18/06/2008 ರ ಟಿಪ್ಪಣಿ.

**ತೀರ್ಮಾನ:** ಆಯುಕ್ತರವರ ದಿನಾಂಕ:18/06/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

# ಬೆಂಗಳೂರು ಮಹಾನಗರ ಪಾಲಿಕೆ

327

**ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:21/06/2008 ರ ನಡವಳಿಗಳು**

**ವಿಷಯದ ಸಂಖ್ಯೆ:256/2008-09**

Providing utility cable ducts & chambers for BESCOM & other utility cables in palace road on East side from 0 to 1.35 Km ರ ಕಾಮಗಾರಿ ಬಗ್ಗೆ.

**ಪ್ರಸ್ತಾವನೆ:**

Providing utility cable ducts & chambers for BESCOM & other utility cables in palace road on East side from 0 to 1.35 Km ರ ಕಾಮಗಾರಿಗೆ ರೂ.98.15 ಲಕ್ಷಗಳಿಗೆ ಕಾರ್ಯಪಾಲಕ ಅಭಿಯಂತರರು (ರಸ್ತೆ ಅಗಲೀಕರಣ) ರವರು ಅಂದಾಜು ಪಟ್ಟಿ ತಯಾರಿಸಿ, ಟೆಂಡರ್ ಕರೆಯಲಾಗಿ ಸದರಿ ಟೆಂಡರಿನಲ್ಲಿ ಶ್ರೀ.ಎನ್.ಸಿ.ನಾಗರಾಜ್ ಮತ್ತು ಮೆ॥ ಪರಿಚಿತ ಕನ್‌ಸ್ಟ್ರಕ್ಷನ್, ಇಬ್ಬರು ಗುತ್ತಿಗೆದಾರರುಗಳು ಭಾಗವಹಿಸಿದ್ದು, ಅರ್ಹರಾದ ಇಬ್ಬರು ಗುತ್ತಿಗೆದಾರರ ಆರ್ಥಿಕ ಬಿಡ್‌ಗಳನ್ನು ದಿನಾಂಕ:02/04/08 ರಂದು ತೆರೆಯಲಾಗಿದ್ದು ವಿವರಗಳು ಈ ಕೆಳಕಂಡಂತಿವೆ.

1) ಶ್ರೀ.ಎನ್.ಸಿ. ನಾಗರಾಜ್ ರವರು ಒಟ್ಟು ರೂ.1,20,99,250/- ನಮೂದಿಸಿದ್ದು, ಇದು 2007-08ನೇ ಸಾಲಿನ ದರಪಟ್ಟಿ ಹಾಗೂ ಹೆಚ್ಚುವರಿ ಸಿಮೆಂಟ್ ಬಿಟುಮಿನ್ ದರಗಳಿಗೆ ಹೋಲಿಸಿದಾಗ ಶೇ.23.09% ರಷ್ಟು ಹೆಚ್ಚಾಗಿರುತ್ತದೆ.
2) ಮೆ॥ ಪರಿಚಿತ ಕನ್‌ಸ್ಟ್ರಕನ್ ರವರು ಒಟ್ಟು ರೂ.1,21,56,456/- ನಮೂದಿಸಿದ್ದು, ಇದು 2007-08ನೇ ಸಾಲಿನ ದರಪಟ್ಟಿ ಹಾಗೂ ಹೆಚ್ಚುವರಿ ಸಿಮೆಂಟ್ ಬಿಟುಮಿನ್ ದರಗಳಿಗೆ ಹೋಲಿಸಿದಾಗ ಶೇ.23.68% ರಷ್ಟು ಹೆಚ್ಚಾಗಿರುತ್ತದೆ.

ಸದರಿ ಕಾಮಗಾರಿಗೆ ಶ್ರೀ.ಎನ್.ಸಿ. ನಾಗರಾಜ್ ರವರು ಕನಿಷ್ಠ ದರ ನಮೂದಿಸಿರುವ ಗುತ್ತಿಗೆದಾರರಾಗಿದ್ದು, ಸದರಿಯವರು ನಮೂದಿಸಿರುವ ದರವನ್ನು 2007-08ನೇ ಸಾಲಿನ ದರಸೂಚಿ ಹಾಗೂ 08-09ನೇ ಸಾಲಿನ ಹೆಚ್ಚುವರಿ ಸಿಮೆಂಟ್/ಉಕ್ಕು/ಬಿಟುಮಿನ್ ದರಗಳಿಗೆ ಹೋಲಿಸಿದಲ್ಲಿ ಶೇ.23.09% ರಷ್ಟು ಹೆಚ್ಚಿರುತ್ತದೆ. ಈ ಹಿನ್ನೆಲೆಯಲ್ಲಿ ಗುತ್ತಿಗೆದಾರರೊಂದಿಗೆ ಸಂಧಾನ ನಡೆಸಲಾಗಿದ್ದು, ಗುತ್ತಿಗೆದಾರರು ಸಂಧಾನದ ನಂತರ ಶೇ. 23.09 ರಿಂದ ಶೇ.19.50% ಕ್ಕೆ ಇಳಿಸಿ ಕಾಮಗಾರಿಯನ್ನು ನಿರ್ವಹಿಸುವುದಾಗಿ ಒಪ್ಪಿರುತ್ತಾರೆ.

ಈ ಹಿನ್ನೆಲೆಯಲ್ಲಿ ಗುತ್ತಿಗೆದಾರರಾದ ಶ್ರೀ.ಎನ್.ಸಿ. ನಾಗರಾಜ್ ರವರ ನಮೂದಿಸಿರುವ ಮೊತ್ತ ರೂ.1,17,45,915/- ಗಳಾಗಿದ್ದು, ಇದನ್ನು 2007-08 ರ ಸಾಲಿನ ದರ ಸೂಚಿ ಹಾಗೂ 2008-09ನೇ ಸಾಲಿನ ಹೆಚ್ಚುವರಿ ಸಿಮೆಂಟ್ ಬಿಟುಮಿನ್ ದರಗಳ ಮೊತ್ತ ರೂ.98,29,217/- ಗಳಿಗೆ ಹೋಲಿಸಿದಾಗ ಶೇ.19.50% ರಷ್ಟು ಹೆಚ್ಚಿರುವ ಈ ಟೆಂಡರ್‌ನ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:11/06/2008 ರ ಟಿಪ್ಪಣಿ.

**ತೀರ್ಮಾನ:** ಆಯುಕ್ತರವರ ದಿನಾಂಕ:11/06/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

# ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:20/06/2008 ರ ನಡವಳಿಗಳು**

ವಿಷಯದ ಸಂಖ್ಯೆ:123/08-09

Providing and laying 600 mm dia S & S type RCC Pipe line along Vrishabhavathi Valley from Malagala to Panchasheela Nagara ರ ಕಾಮಗಾರಿಯ ಬಗ್ಗೆ.

ಪ್ರಸ್ತಾವನೆ:

Providing and laying 600 mm dia S & S type RCC Pipe line along Vrishabhavathi Valley from Malagala to Panchasheela Nagara ರ ಕಾಮಗಾರಿಯನ್ನು ಬೃಹತ್ ನೀರುಗಾಲುವೆ ನವೀಕರಣ ಯೋಜನೆ, ವೃಷಭಾವತಿ ಕಣಿವೆ, ಪ್ಯಾಕೇಜ್ – 4 ರ ಅಡಿಯಲ್ಲಿ ಮಾನ್ಯ ಆಯುಕ್ತರವರ ಆದೇಶದಂತೆ ರೂ.85.00 ಲಕ್ಷಗಳ ಅಂದಾಜು ಪಟ್ಟಿಗೆ ಕಾರ್ಯಪಾಲಕ ಅಭಿಯಂತರರು (ವೃಷಭಾವತಿ ಕಣಿವೆ) ರವರು ಎರಡು ಲಕೋಟೆ ಪದ್ಧತಿಯಲ್ಲಿ ಟೆಂಡರ್ ಕರೆಯಲಾಗಿರುತ್ತದೆ.

ಸದರಿ ಕಾಮಗಾರಿಯ ಟೆಂಡರ್‌ನಲ್ಲಿ ಇಬ್ಬರು ಗುತ್ತಿಗೆದಾರರು ಭಾಗವಹಿಸಿದ್ದು, ಸದರಿಯವರ ತಾಂತ್ರಿಕ ಬಿಡ್ಡ್‌ಗಳನ್ನು ಪರಿಶೀಲಿಸಲಾಗಿ ತಾಂತ್ರಿಕ ಬಿಡ್ಡ್‌ನಲ್ಲಿ ಇಬ್ಬರು ಗುತ್ತಿಗೆದಾರರು ಅರ್ಹರಾಗಿದ್ದು, ಇವರುಗಳ ಆರ್ಥಿಕ ಬಿಡ್ಡ್‌ಗಳನ್ನು ತೆರೆಯಲಾಗಿ ವಿವರಗಳು ಈ ಕೆಳಕಂಡಂತಿರುತ್ತದೆ.

| ಕ್ರ. ಸಂ. | ಗುತ್ತಿಗೆದಾರರ ಹೆಸರು | ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) | ಟೆಂಡರ್‌ಗಿಟ್ಟ ಮೊಬಲಗು (ರೂ.ಗಳಲ್ಲಿ) | ನಮೂದಿಸಿದ ಶೇಕಡವಾರು ಮೊತ್ತ (ರೂ. ಗಳಲ್ಲಿ) |
|---|---|---|---|---|
| 1 | ಜಿ.ಓ.ವಿಜಯನ ಗೌಡ | 85.00 | 82,40,019.00 | 40.32% ರಷ್ಟು ಹೆಚ್ಚು (ರೂ.1,15,62,629.00) |
| 2 | ಸಿ.ಎನ್.ಎಸ್.ಮೂರ್ತಿ | 85.00 | 82,40,019.00 | 55.19% ರಷ್ಟು ಹೆಚ್ಚು (ರೂ.1,27,87,581.00) |

ಕನಿಷ್ಠ ಗುತ್ತಿಗೆದಾರರಾದ ಜಿ.ಓ.ವಿಜಯನಗೌಡ ರವರು ನಮೂದಿಸಿರುವ ದರವಾದ ರೂ.1,15,62,629.00 ಗಳನ್ನು 2007-08ನೇ ಸಾಲಿನ ದರಪಟ್ಟಿಯ ಆಧಾರದ ಮೇಲೆ ತಯಾರಿಸಿದ ಅಂದಾಜು ಪಟ್ಟಿಯ ಮೊತ್ತಕ್ಕೆ ತುಲನೆ ಮಾಡಿದಾಗ ಶೇ:40.32% ಹೆಚ್ಚಿರುತ್ತದೆ. ಸದರಿ ಗುತ್ತಿಗೆದಾರರನ್ನು ಸಂಧಾನಕ್ಕೆ ಆಹ್ವಾನಿಸಲಾಗಿ ಗುತ್ತಿಗೆದಾರರು ಸದರಿ ಕಾಮಗಾರಿಯನ್ನು ಶೇ.19.98 (ರೂ.98,86,374.79) ಹೆಚ್ಚುವರಿಗೆ ನಿರ್ವಹಿಸುವುದಾಗಿ ಒಪ್ಪಿರುತ್ತಾರೆ. ಆದುದರಿಂದ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ, ಟೆಂಡರ್ ಹಾಗೂ ಗುತ್ತಿಗೆದಾರರು ಸಂಧಾನದ ನಂತರ ನಮೂದಿಸಿರುವ ಮೊತ್ತ ರೂ98,86,374.79 ಗಳಿಗೆ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:13/06/2008 ರ ಟಿಪ್ಪಣಿ.

**ತೀರ್ಮಾನ:** ಆಯುಕ್ತರವರ ದಿನಾಂಕ:13/06/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು